# ಆಧುನಿಕ ಕನ್ನಡ ಸಾಹಿತ್ಯ: ಸಂಶೋಧನೆಯ ಸವಾಲುಗಳು.

**ಶಿವರಾಜು ಎನ್.**
ಸಂಶೋಧನಾರ್ಥಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

**Article Link: https://aksharasurya.com/2023/09/shivaraju-n-5/**

## ABSTRACT:

ಮನುಷ್ಯ ಸಂಘ ಜೀವಿ. ಮನುಷ್ಯ ಸಮಾಜದ ನಿಕಟ ಸಂಪರ್ಕವಿಲ್ಲದೆ ಬಾಳಿ ಬದುಕಲಾರ. ಮನುಷ್ಯ ತನ್ನ ಸುಖೀ ಜೀವನಕ್ಕಾಗಿ ಹಲವಾರು ಸಂಶೋಧನೆಗಳನ್ನು ಮಾಡಿದ್ದಾನೆ. ಮನುಷ್ಯ ತನ್ನ ಮಿತಿಮೀರಿದ ಸಂಶೋಧನೆಗಳಿಂದ ಅವನತಿಯ ಹಾದಿಯನ್ನು ತಲುಪಿದ್ದಾನೆ. ಮಿತಿ ಮೀರಿದ ಸಂಶೋಧನೆಗಳಿಂದ ಸಾಕಷ್ಟು ರೋಗ, ರುಜಿನಗಳು ಹುಟ್ಟಿಕೊಂಡಿವೆ. ಪ್ರಪಂಚದ ಸಾಕಷ್ಟು ಕೃಷಿ ಭೂಮಿ ಮರುಭೂಮಿಯಾಗಿ ಪರಿವರ್ತನೆಯಾಗಿದೆ. ಪ್ರಪಂಚದ ಹಲವಾರು ನದಿಗಳು ತಮ್ಮ ಹರಿಯುವಿಕೆಯನ್ನು ನಿಲ್ಲಿಸಿವೆ. ಭಾರತದಂತಹ ಅಭಿವೃದ್ದಿಶೀಲ ದೇಶದಲ್ಲಿ ನಿಜವಾದ ಸಂಶೋಧನೆಗಳಿಗೆ ಪ್ರೋತ್ಸಾಹವಿಲ್ಲ. ಪಿಹೆಚ್.ಡಿ. ಸಂಶೋಧಕ–ರಿಗೆ ಮೀಸಲಾತಿ, ಸ್ವಜನಪಕ್ಷಪಾತ, ಭ್ರಷ್ಟಾಚಾರ ಇತ್ಯಾದಿ ಕಾರಣಗಳಿಂದ ಮಾರ್ಗದರ್ಶಕರು ಲಭ್ಯವಾಗುವುದಿಲ್ಲ. ಪ್ರತಿಭಾವಂತ ಸಂಶೋಧಕರಿಗೆ ಅವಕಾಶ ಸಿಗಬೇಕು. ಅಂತಹ ಸಂಶೋಧಕರು ಕೈಗೊಳ್ಳುವ ಸಂಶೋಧನೆಗಳಿಂದ ರಾಷ್ಟ್ರ ಪ್ರಗತಿಯ ಪಥದತ್ತ ಸಾಗಲಿ ಎಂಬುದು ಪ್ರಸ್ತುತ ಲೇಖನದ ಆಶಯ.

## KEYWORDS:

ಸಂಶೋಧನೆ, ಸಂಶೋಧಕ, ಮಾರ್ಗದರ್ಶಕ, ಕೊರತೆ, ಪ್ರೋತ್ಸಾಹ, ಅವಕಾಶ, ವ್ಯವಸ್ಥೆ.

ಮಾನವನಿಗೂ ಆತ ಕೈ ಹಾಕಿದ, ಸಂಶೋಧನೆಗಳಿಗೂ ಆದಿ ಕಾಲದ ಸಂಬಂಧವಿದೆ. 5000 ವರ್ಷಗಳ ಹಿಂದೆ ಕಾಡುಮೇಡುಗಳಲ್ಲಿ ಅಲೆದು ಗೆಡ್ಡೆ ಗೆಣಸು ತಿಂದು, ಬೆತ್ತಲೆಯಾಗಿ ಅಲೆದಾಡಿ ಜೀವನ ನಿರ್ವಹಣೆ ಮಾಡುತ್ತಿದ್ದ ಆದಿ ಮಾನವನಿಗೂ, ಪ್ರಸ್ತುತ ದಿನದ ಮಾನವನಿಗೂ ಸಾಕಷ್ಟು ಅಂತರವಿದೆ. ಇಂದು ಮಾನವ ತನ್ನ ಸಂಶೋಧನೆಗಳಿಂದ ಸಾಕಷ್ಟು ಬೆಳವಣಿಗೆ ಹೊಂದಿದ್ದಾನೆ. ಈಗಿನ ಮಾನವ ಹಕ್ಕಿಯಂತೆ ಹಾರಬಲ್ಲ, ಮೀನಿನಂತೆ ಈಜಬಲ್ಲ, ಇಂದು ಮಾನವ

ತಾನು ಹಾಕುತ್ತಿರುವ ಬಟ್ಟೆ, ಆಹಾರ, ವಸತಿ, ಆತ ಓಡಾಡುವ ಕಾರು, ಬಸ್ಸು, ರೈಲು ಎಲ್ಲಾ ಆತನ ಸಂಶೋಧನೆಯ ಫಲವೆಂದೇ ಹೇಳಬಹುದು. ಸಂಶೋಧನೆ ಎಂದರೆ ಸಾಮಾನ್ಯ ಅರ್ಥ ಹೊಸಬಗೆಯ ವಸ್ತುಗಳನ್ನು ವಿಚಾರಗಳನ್ನು ಕಂಡು ಹಿಡಿಯುವುದೇ ಆಗಿದೆ.

ಸಂಶೋಧನೆಯನ್ನು ಕುರಿತು ಸಂಶೋಧಕ ಎ. ಆರ್.ಕೃಷ್ಣಶಾಸ್ತ್ರಿಯವರು ನೀಡಿರುವ ವ್ಯಾಖ್ಯೆ ಗಮನಾರ್ಹವಾದದ್ದು.

**“ಸಂಶೋಧನೆಯು ಭೂಮಿ ಅಗೆದು ಚಿನ್ನ ತೆಗೆಯುವ ಹಾಗೆ**
**ಅದಕ್ಕೆ ಬುದ್ಧಿಬೇಕು, ಆಯುಧ ಬೇಕು, ಯಂತ್ರಸಾಮಾಗ್ರಿ ಬೇಕು**
**ಹಲವು ಕೆಲಸಗಾರರ, ಶಾಸ್ತ್ರಜ್ಞರು ಸಹಬೇಕು”.**[1]

ಕನ್ನಡ ಭಾಷೆ ಸಾಹಿತ್ಯಗಳಲ್ಲಿ ಆಧುನಿಕಾರ್ಥದಲ್ಲಿ ಸಂಶೋಧನೆ ಎಂದಿನಿಂದ ಆರಂಭವಾಯಿತು ಎಂಬುದು ಇನ್ನು ನಿಕರವಾಗಿ ತಿಳಿದಿಲ್ಲ. 1784 ರಲ್ಲಿ ಸ್ಥಾಪಿತವಾದ ರಾಯಲ್ ಏಷ್ಯಾಟಿಕ್ ಸೊಸೈಟಿಯ ಚಟುವಟಿಕೆಗಳೇ ಕರ್ನಾಟಕದ ಸಂಶೋಧನೆಗೆ ಕನ್ನಡ ಭಾಷೆ ಸಾಹಿತ್ಯಗಳ ಶೋಧಗಳಿಗೆ ವೇದಿಕೆಯಾದವು. ಕರ್ನಾಟಕ ಸಾಹಿತ್ಯ ಅಕಾಡೆಮಿಗೆ 2001ರಲ್ಲಿ ‘ಶತಮಾನದ ಸಂಶೋಧನೆ’ ಎನ್ನುವ ಸಂಶೋಧನಾ ಲೇಖನಗಳ ಸಂಕಲನ ಕೃತಿಯನ್ನು ಸಂಪಾಧಿಸಿ ಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತಿ ಪ್ರಾಧ್ಯಾಪಕರಾದ ಡಾ.ಎನ್. ಎಸ್. ತಾರಾನಾಥ ಅವರು ಸಂಶೋಧಕನಿಗೆ ತ್ಯಾಗ ಮನೋಭಾವವಿರಬೇಕು ಎಂಬ ವಿಚಾರವನ್ನು ಹಲವಾರು ಉದಾಹರಣೆಗಳ ಮೂಲಕ ವಿವರಿಸುತ್ತಾರೆ.ವಚನ ಸಂಗ್ರಹ ಸಂಪಾಧನೆಗಳಿಗೆಂದೇ ಪ. ಗು. ಹಳಕಟ್ಟಿ ಅವರೂ, ಹರಿದಾಸರು ಕೀರ್ತನೆಗಳನ್ನು ಸಂಗ್ರಹಿಸಲೆಂದೇ ಲಿಂಗಸುಗೂರಿನ ಗೊರಬಾಳ ಹನುಮಂತ ರಾಯರೂ, ತಮ್ಮ ವಕೀಲ ವೃತ್ತಿಯನ್ನು ತೊರೆದ ವಿಚಾರವನ್ನು ಡಾ. ಎನ್. ಎಸ್. ತಾರಾನಾಥ ಅವರು ಮುನ್ನಡಿಯಲ್ಲಿ ಹೇಳಿದ್ದಾರೆ.

**ಮಾರ್ಗದರ್ಶಕರ ಕೊರತೆ:**

ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಪ್ರವೇಶ ಮಾಡುವ ಬಹುತೇಕ ಸಂಶೋಧಕರು ಎದುರಿಸುತ್ತಿರುವ ಬಹಳ ಮುಖ್ಯವಾದ ಸಮಸ್ಯೆಯೆಂದರೆ ಮಾರ್ಗದರ್ಶಕರ ಸಮಸ್ಯೆ.ಸಂಶೋಧನೆಗೆ ಪ್ರವೇಶ ಮಾಡುವ ಸಂಶೋಧಕ ಎಷ್ಟೇ ಪ್ರತಿಭಾವಂತನಾಗಿದ್ದರೂ ಸಹ ಆತನಿಗೆ ಮಾರ್ಗದರ್ಶಕರು ದೊರೆಯದಿದ್ದ ಸಂದರ್ಭದಲ್ಲಿ ಆತನ ಪ್ರತಿಭೆಗೆ ಮನ್ನಣೆ ಇರುವುದಿಲ್ಲ. ಇತರೆ ಮಾಧ್ಯಮಗಳ ಮೂಲಕ ತನ್ನ ಪ್ರತಿಭೆಯನ್ನು ಹೊರಹಾಕಲು ಸೂಕ್ತ ವೇದಿಕೆಗಳು ಸಿಗುವ

ಸಾಧ್ಯತೆಗಳು ಕಡಿಮೆ. ಮಾರ್ಗದರ್ಶಕರು ದೊರೆಯದಿರುವ ಕಾರಣದಿಂದ ಎಷ್ಟೋ ಪ್ರತಿಭಾವಂತ ವಿದ್ಯಾರ್ಥಿಗಳು ಅದರಲ್ಲೂ NET-JRF, RJNF ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಶಿಷ್ಯ ವೇತನ ಪಡೆಯಲು ಅರ್ಹರಿದ್ದರೂ ಸಹ ಮಾರ್ಗದರ್ಶಕರು ದೊರೆಯದೇ ಸಂಶೋಧನಾ ಶಿಷ್ಯವೇತನವನ್ನು ನಷ್ಟ ಮಾಡಿಕೊಂಡ ಸಾಕಷ್ಟು ವಿದ್ಯಾರ್ಥಿಗಳು ಕಾಣಸಿಗುತ್ತಾರೆ. ಕೆಲವು ಮಾರ್ಗದರ್ಶಕರ ಬಳಿ ಸೀಟ್‌ಗಳು ಖಾಲಿಯಿದ್ದರೂ ಸಂಶೋಧನಾ ವಿದ್ಯಾರ್ಥಿ ತಮಗಿಂತ ಹೆಚ್ಚಿನ ವಿಚಾರವನ್ನು ತಿಳಿದುಕೊಂಡಿದ್ದಾನೆ ಎನ್ನುವ ಕಾರಣಕ್ಕೆ ಮಾರ್ಗದರ್ಶನ ಮಾಡಲು ಒಪ್ಪುವುದಿಲ್ಲ.

**ರಾಜಕೀಯ ಒತ್ತಡ:**

ಕನ್ನಡ ಸಾಹಿತ್ಯ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆ ಮಾಡುತ್ತಿರುವ ಬಹುತೇಕ ಸಂಶೋಧಕರು ರಾಜಕೀಯ ಪ್ರಾಬಲ್ಯದ ಮೂಲಕ ಪಿಹೆಚ್.ಡಿ ಪ್ರವೇಶವನ್ನು ಪಡೆದಿರುತ್ತಾರೆ.ತಾವೂ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮಾಡುವ ಬಹುತೇಕ ವಿದ್ಯಾರ್ಥಿಗಳು ರಾಜಕೀಯ ಪ್ರಾಬಲ್ಯವನ್ನು ಬಳಸಿ ಪ್ರವೇಶ ಪಡೆದಿರುತ್ತಾರೆ. NET, KSET ಪಾಸ್ ಮಾಡಿದ ಎಷ್ಟೋ ವಿದ್ಯಾರ್ಥಿಗಳೂ ಬೇರೆ, ಬೇರೆ ವಿಶ್ವವಿದ್ಯಾಲಯಗಳಿಗೆ ಹೋಗಿ ಸಂಶೋಧನೆ ಮಾಡಬೇಕಾದ ಅನಿವಾರ್ಯತೆ ಉಂಟಾಗಿದೆ. ರಾಜಕಾರಣಿಗಳ ರಾಜಕಾರಣಕ್ಕಿಂತ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರ ರಾಜಕಾರಣ ಸಮಾಜ–ಕ್ಕೆ ಮಾರಕವಾದದ್ದು. ಜೆಆರ್‌ಎಫ್ ಪಾಸ್ ಮಾಡಿದ ವಿದ್ಯಾರ್ಥಿಗಳಿಗೆ ಅವರು ಬಯಸಿದ ವಿಶ್ವವಿದ್ಯಾನಿಲಯದಲ್ಲಿಯೇ, ಅವರು ಬಯಸಿದ ಮಾರ್ಗದರ್ಶಕರ ಬಳಿಯೇ ಮಾರ್ಗದರ್ಶನ ಪಡೆಯುವಂತಹ ನಿಯಮವನ್ನು ಯು.ಜಿ.ಸಿ. ತುರ್ತಾಗಿ ರೂಪಿಸಬೇಕಿದೆ.

**ಸಂಶೋಧನೆಯಲ್ಲಿ ಜಾತೀಯತೆ:**

ಇದು ಸಂಶೋಧನೆಗೆ ಅಂಟಿರುವ ಮತ್ತೊಂದು ಕಳಂಕವಾಗಿದೆ.ಬಹುತೇಕ ಮಾರ್ಗದರ್ಶಕರು ತಮ್ಮ ಜಾತಿ, ಮತದವನಿಗೆ ಮಾರ್ಗದರ್ಶನ ಮಾಡಲು ಮುಂದಾದಾಗ ಗುಣಮಟ್ಟ ಕುಸಿಯುತ್ತದೆ.ತಮ್ಮ ಜಾತಿ, ಮತ, ಧರ್ಮದ ಬಗ್ಗೆ ಸಂಶೋಧನೆ ಮಾಡುವ ಸಂಶೋಧಕರು ಕೆಲವು ಸಂದರ್ಭಗಳಲ್ಲಿ ಸತ್ಯವನ್ನು ಮರೆಮಾಚುವ ಸಾಧ್ಯತೆಗಳಿರುತ್ತವೆ. ಹೀಗಾಗಿ ಸಂಶೋಧನೆಯಲ್ಲಿ ಗುಣಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ಜಾತಿ ಒಂದು ಪ್ರಮುಖ ಸವಾಲಾಗಿ ಪರಿಣಮಿಸಿದೆ.

**ಕೆಲವು ಸಾಹಿತ್ಯ ಪ್ರಕಾರಗಳಿಗೆ ಸೀಮಿತವಾದ ಸಾಹಿತ್ಯ ಸಂಶೋಧನೆ:**

ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿರುವ ಸವಾಲುಗಳಲ್ಲಿ ಇದು ಬಹು ಮುಖ್ಯವಾದಂತಹ ಸವಾಲಾಗಿದೆ.ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಥೆ, ಕಾದಂಬರಿ, ಕಾವ್ಯ, ನಾಟಕ.ಈ ನಾಲ್ಕು ಪ್ರಕಾರಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿವೆ. ಆದರೆ, ವಿಚಾರ ಸಾಹಿತ್ಯ, ಲಲಿತ ಪ್ರಬಂಧ, ಅನುವಾದ ಸಾಹಿತ್ಯ, ಸಂಶೋಧನಾ ಸಾಹಿತ್ಯ, ಆತ್ಮಕಥೆಗಳು, ಜೀವನ ಚರಿತ್ರೆಗಳು, ಪ್ರವಾಸ ಕಥನಗಳನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ.ಹೊಸ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳತ್ತ ಸಂಶೋಧನೆ ಕೈಗೊಳ್ಳಲು ವಿದ್ಯಾರ್ಥಿಗಳಲ್ಲಿ ಹೇಗೆ ನಿರಾಸಕ್ತಿ ಇದೆಯೋ ಅದೇ ರೀತಿ ಮಾರ್ಗದರ್ಶಕರಲ್ಲಿಯೂ ಸಹ ನಿರುತ್ಸಾಹವಿದೆ.

**ಸತ್ಯವನ್ನು ಒಪ್ಪಿಕೊಳ್ಳದ ವ್ಯವಸ್ಥೆ:**

ಆಧುನಿಕ ಸಂಶೋಧನೆಯನ್ನು ವ್ಯಕ್ತಿ ಮತ್ತು ವ್ಯವಸ್ಥೆಯ ವಿರುದ್ಧ ಹೋರಾಟವಾಗಿದೆ. **"ಸತ್ಯವಂತರಿಗಿದು ಕಾಲವಲ್ಲ"**[2] ಎನ್ನುವ ಪುರಂದರ ದಾಸರ ವಾಣಿಯಂತೆ ನಮ್ಮ ಸಮಾಜ ಸಾಹಿತ್ಯ ಸಂಶೋಧನೆಗಳಿಂದ ಹೊರಬರುವ ಸತ್ಯವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಉದಾ:– ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಆ ಭಾಗದ ಹಿಂದುಳಿದ ವರ್ಗದವರ, ಪ್ರಮುಖ ಆರಾಧ್ಯ ದೈವಗಳೆಂದರೆ ಮಂಟೇಸ್ವಾಮಿ ಹಾಗೂ ಮಲೆ ಮಹದೇಶ್ವರರು. ಸಾಹಿತ್ಯ ಸಂಶೋಧನೆಗಳು ದೃಢಪಡಿಸಿರುವ ಪ್ರಕಾರ ಮಂಟೇಸ್ವಾಮಿ ಹಾಗೂ ಮಲೆ ಮಹದೇಶ್ವರರು ಮಾದಿಗ ಜನಾಂಗದವರು.ಈ ವಿಚಾರವನ್ನು ಜನಸಾಮಾನ್ಯರು ಒಪ್ಪಿಕೊಳ್ಳಲು ಸಿದ್ಧರಿಲ್ಲ, ಜನಸಾಮಾನ್ಯರ ಮಾತು ಹಾಗಿರಲಿ, ಬೇರೆ ಬೇರೆ ರಾಜಕೀಯ ಕಾರಣಗಳಿಂದ ಕೆಲ ವಿಶ್ವವಿದ್ಯಾಲಯ ಪ್ರಾಧ್ಯಾಪಕರು ಸಹ ಸತ್ಯವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ.

**ಸೂಕ್ತ ಸಮರ್ಪಕ ವಾದ ಗ್ರಂಥಾಲಯಗಳ ಕೊರತೆ:**

ಸಾಹಿತ್ಯ ಸಂಶೋಧಕರು ಎದುರಿಸುತ್ತಿರುವ ಬಹುಮುಖ್ಯ ಸವಾಲುಗಳಲ್ಲಿ ಈ ಸಮಸ್ಯೆಯು ಬಹಳ ಮುಖ್ಯವಾದಂತಹ ಸಮಸ್ಯೆಯಾಗಿದೆ. 'ಉಳುವವನಿಗೆ ನೇಗಿಲು ಹೇಗೆ ಮುಖ್ಯವೋ ಹಾಗೆ ಸಂಶೋಧಕರಿಗೆ ಸಾಕಷ್ಟು ಗ್ರಂಥಾಲಯಗಳ ಸೌಲಭ್ಯವಿರಬೇಕು'. ಆದರೆ, ಕೆಲವು ಕಡೆ ಮಾತ್ರ ಗ್ರಂಥಾಲಯಗಳಲ್ಲಿ ಸಂಶೋಧನೆಗೆ ಅಗತ್ಯವಾದಂತಹ ಕೃತಿಗಳು ದೊರೆಯುತ್ತಿಲ್ಲ. ಏಕೆಂದರೆ ಸಂಶೋಧನೆ ಕೈಗೊಳ್ಳುವ ಎಲ್ಲಾ ಸಂಶೋಧಕರಿಗೂ ಸರ್ಕಾರದ ನೆರವು ದೊರೆಯುವುದಿಲ್ಲ. ಬಹುತೇಕ ವಿದ್ಯಾರ್ಥಿಗಳು ಗ್ರಂಥಾಲಯವನ್ನು ಅವಲಂಬಿಸಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮಾರುಕಟ್ಟೆಯಲ್ಲಿ ದೊರೆಯದಿರುವ ಕೆಲವು ಪುಸ್ತಕಗಳನ್ನು

ಗ್ರಂಥಾಲಯಗಳಲ್ಲೇ ಪರಾಮರ್ಶನ ಮಾಡಬೇಕಾಗುತ್ತದೆ.

**ಸಿನಿಮಾವನ್ನು ಕುರಿತ ಸಂಶೋಧನೆಗಳಿಗೆ ಪ್ರೋತ್ಸಾಹವಿಲ್ಲದಿರುವುದು:**

ಸಾಹಿತ್ಯ ಮತ್ತು ಸಿನಿಮಾಗಳ ನಡುವೆ ಅವಿನಾಭಾವ ಸಂಬಂಧವಿದೆ. ಏಕೆಂದರೆ, ಸಾಕಷ್ಟು ಸಾಹಿತ್ಯ ಕೃತಿಗಳು ಸಿನಿಮಾವಾಗಿ ಜನತೆಯನ್ನು ತಲುಪಿವೆ. ಸಿನಿಮಾ ಸಾಹಿತ್ಯವನ್ನು ಕುರಿತು ಹೆಚ್ಚಿನ ಸಂಶೋಧನೆಗಳು ನಡೆದಾಗ ಸಮಾಜಕ್ಕೆ ಸಂಶೋಧನಾ ವಲಯಕ್ಕೆ ಒಂದು ಹೊಸ ಕೊಡುಗೆಯನ್ನು ನೀಡಿದ ಹಾಗೆ ಆಗುತ್ತದೆ. ಉದಾಹರಣೆ : ಸಂಶೋಧಕನೋರ್ವ "ಸಿನಿಮಾವಾಗಿರುವ ಕನ್ನಡ ಸಣ್ಣಕಥೆಗಳ ವಿಮರ್ಶಾತ್ಮಕ ಅಧ್ಯಯನ"ಎಂಬ ವಿಚಾರವನ್ನು ತನ್ನ ಅಧ್ಯಯನ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಾಗ ಮಾರ್ಗದರ್ಶಕರು ಆತನಿಗೆ ಮಾರ್ಗದರ್ಶನ ನೀಡಲು ತಾತ್ವಿಕ ಒಪ್ಪಿಗೆಯನ್ನು ನೀಡಿದ್ದರೂ ಸಹ ಮಾರ್ಗದರ್ಶಕರ ಮೇಲಾಧಿಕಾರಿಗಳು, ವಿಶ್ವವಿದ್ಯಾನಿಲಯಗಳ ನಿರಾಕಾರಣೆಯಿಂದ ಸಂಶೋಧನೆ ವಿದ್ಯಾರ್ಥಿಗೆ ತಾನು ಆಸೆ ಪಟ್ಟಿರುವ ವಿಷಯದ ಬಗ್ಗೆ ಸಂಶೋಧನೆ ಮಾಡಲು ಅವಕಾಶ ಸಿಗುವುದಿಲ್ಲ. ಮಾರ್ಗದರ್ಶಕರು ಹೇಳಿದ ಯಾವುದೋ ವಿಷಯದ ಮೇಲೆ ಸಂಶೋಧನೆ ಕೈಗೊಂಡಾಗ ನಿರಾಸಕ್ತಿ, ಸಂಪನ್ಮೂಲಗಳ ಕೊರತೆಯಿಂದ ಮಹಾ ಪ್ರಬಂಧದ ಗುಣಮಟ್ಟ ಕುಸಿಯುತ್ತದೆ.

**ಜೀವನದ ಅಭದ್ರತೆಯ ಆತಂಕ:**

ವಿದ್ಯಾರ್ಥಿಗಳಲ್ಲಿ ಏಕಾಗ್ರತೆಯ ಕೊರತೆಯೂ ಸಹ ಸಾಹಿತ್ಯ ಸಂಶೋಧನೆಗೆ ಒಂದು ಸವಾಲಾಗಿದೆ. ಸಾಹಿತ್ಯ ಸಂಶೋಧನೆಯಲ್ಲಿ ಜಿ. ಎಸ್. ಶಿವರುದ್ರಪ್ಪ, ಪ್ರಭುಶಂಕರ, ಚಿದಾನಂದ ಮೂರ್ತಿ ಮೊದಲಾದವರು ಸಂಶೋಧನೆ ಮಾಡುತ್ತಿದ್ದ ಕಾಲದಲ್ಲಿ ಅವರಿಗೆ ಜೀವನದ ಭದ್ರತೆ ಕುರಿತು ಯಾವುದೇ ರೀತಿಯ ಭಯದ ಭಾವನೆಗಳು ಇರಲಿಲ್ಲ. ಏಕೆಂದರೆ, ಅವರಿಗೆ ಪ್ರಾಧ್ಯಾಪಕರ ಹುದ್ದೆ ದೊರೆಯದಿದ್ದರೂ ಬೇರೆ ಇಲಾಖೆಯಲ್ಲಾದರೂ ಒಳ್ಳೆಯ ಹುದ್ದೆ ದೊರೆಯುವ ಸಾಧ್ಯತೆ ಇತ್ತು. ಆದರೆ, ಪ್ರಸ್ತುತ ದಿನಗಳಲ್ಲಿ ವಿಜ್ಞಾನ, ವಾಣಿಜ್ಯ ಸಂಶೋಧನೆ ಮಾಡಿದವರಿಗೆ ಉದ್ಯೋಗ ಲಭಿಸುವ ಸಾಧ್ಯತೆಗಳಿರುತ್ತದೆ.ಕಲಾ ವಿಭಾಗದಲ್ಲಿ ಸಂಶೋಧನೆ ಮಾಡಿದವರಿಗೆ ಅದರಲ್ಲೂ ಸಾಹಿತ್ಯ, ಜನಪದ ವಿಷಯಗಳಲ್ಲಿ ಪಿಹೆಚ್.ಡಿ ಪದವಿ ಪಡೆದವರಿಗೆ ನೌಕರಿ ಸಿಗುವ ಸಾಧ್ಯತೆ ತುಂಬಾ ಕಡಿಮೆ.ಈ ಕಾರಣದಿಂದ ಸಾಹಿತ್ಯ ವಿಭಾಗದಲ್ಲಿ ಸಂಶೋಧನೆ ಮಾಡುತ್ತಿರುವ ಬಹುತೇಕ ಸಂಶೋಧಕರು ಎರಡು ದೋಣಿಗಳ ಪಯಣಿಗರಾಗಿದ್ದಾರೆ.ಒಂದು ಮನಸ್ಸು ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಇನ್ನೊಂದು ಮನಸ್ಸು ಸಂಶೋಧನೆಯತ್ತ ಒಂದು ವೇಳೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನೌಕರಿ ಪಡೆದುಕೊಂಡರೆ ಸಂಶೋಧನೆಯ ಗುಣಮಟ್ಟ ಮತ್ತಷ್ಟು ಕುಸಿಯುತ್ತದೆ.

**ಮಾರ್ಗದರ್ಶಕರಲ್ಲಿ ವಿಷಯ ಪ್ರಭುತ್ವದ ಕೊರತೆ:**

ಸಾಹಿತ್ಯ ಸಂಶೋಧನೆಗೆ ಮಾರ್ಗದರ್ಶನ ಮಾಡುವ ಕೆಲವು ಮಾರ್ಗದರ್ಶಕರಲ್ಲಿ ವಿಷಯ ಪ್ರಭುತ್ವದ ಕೊರತೆ ಇದೆ. ಹಾಗಂತ ಸಾಹಿತ್ಯ ಸಂಶೋಧನೆಗಳಿಗೆ ಮಾರ್ಗದರ್ಶನ ಮಾಡುವ ಮಾರ್ಗದರ್ಶಕರೆಲ್ಲರೂ ದಡ್ಡರೆಂದು ನಾನು ಹೇಳುತ್ತಿಲ್ಲ. ಕೆಲವು ಸಂದರ್ಭಗಳಲ್ಲಿ ಮಾರ್ಗದರ್ಶಕರು ತಮ್ಮ ವಿಷಯ ಪ್ರಭುತ್ವದ ಕೊರತೆಯಿಂದ ಸಂಶೋಧನಾ ವಿದ್ಯಾರ್ಥಿಗಳು ಇಷ್ಟಪಟ್ಟ ವಿಷಯವನ್ನು ಕುರಿತು ಅಧ್ಯಯನ ಮಾಡಲು, ಮಾರ್ಗದರ್ಶಕರಾಗಲು ಮಾರ್ಗದರ್ಶಕರು ಒಪ್ಪುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ವಿಷಯ ಪ್ರಭುತ್ವ ಹೊಂದಿರುವ ಮಾರ್ಗದರ್ಶಕರು ತಮ್ಮ ವಿಷಯಗಳನ್ನು ಸಂಶೋಧನಾ ವಿದ್ಯಾರ್ಥಿಗಳ ಮೇಲೆ ಹೇರುತ್ತಾರೆ. ಇಂತಹ ಸಂದರ್ಭಗಳಲ್ಲಿ ಮಾರ್ಗದರ್ಶಕರು ಮತ್ತು ಸಂಶೋಧಕರ ನಡುವೆ ಸಮನ್ವಯ ಕಷ್ಟ ಸಾಧ್ಯ.

**ಅಸಹಕಾರ:**

"ಸಹಕಾರ ಎಲ್ಲಿದೆಯೋ, ಅಲ್ಲಿದೆ ಪರಿಹಾರ"ಎನ್ನುವ ಮಾತಿನಂತೆ ಯಾವುದೇ ಕಾರ್ಯದಲ್ಲಿ ನಾವೂ ಯಶಸ್ವಿಯಾಗ ಬೇಕಾದರೆ ಸಹಕಾರ ಮುಖ್ಯ. ಸಾಹಿತ್ಯ ಸಂಶೋಧಕರು ಕ್ಷೇತ್ರ ಕಾರ್ಯ ಆಧಾರಿತ ವಿಷಯಗಳಲ್ಲಿ ಸಂಶೋಧನೆ ಕೈಗೊಂಡಾಗ ಸಂಶೋಧಕರು, ಜನಸಾಮಾನ್ಯರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಬೇಕಾಗುತ್ತದೆ.ಆದರೆ, ಎಷ್ಟೋ ಸಂದರ್ಭಗಳಲ್ಲಿ ಜನ ಸಾಮಾನ್ಯರು ಸಮರ್ಪಕವಾಗಿ ಮಾಹಿತಿಯನ್ನು ನೀಡುವುದಿಲ್ಲ. ಇದರಿಂದ, ಸಂಶೋಧನೆಯಲ್ಲಿ ಹಲವಾರು ಏರು, ಪೇರುಗಳಾಗುತ್ತವೆ.

**ಜನಾಂಗವನ್ನು ಕುರಿತು ನಡೆಯುವ ಅಧ್ಯಯನಗಳಿಗೆ ಪ್ರೋತ್ಸಾಹವಿಲ್ಲದಿರುವುದು:**

ಜನಾಂಗಗಳನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಕೆಲ ಸಂಶೋಧನೆಗಳು ನಡೆದಿವೆ. ಜನಾಂಗಗಳನ್ನು ಕುರಿತು ನಡೆಯುತ್ತಿರುವ ಅಧ್ಯಯನಗಳಿಗೆ ಇತ್ತೀಚೆಗೆ ಪ್ರೋತ್ಸಾಹ ದೊರೆಯುತ್ತಿಲ್ಲ. ಜನಾಂಗಗಳ ಸಾಂಸ್ಕೃತಿಕ ಅಧ್ಯಯನದಿಂದ ಎಷ್ಟೋ ಅಜ್ಞಾತ ಬುಡಕಟ್ಟು ಜನಾಂಗಗಳು ಹಾಗೂ ಆ ಜನಾಂಗಗಳ ಸಂಸ್ಕೃತಿಗಳು ಹೊರಬರುತ್ತವೆ. ಜನಾಂಗಗಳನ್ನು ಕುರಿತು ಮಾಡುವ ಅಧ್ಯಯನದಿಂದ ಒಂದು ಹೊಸ ಸಂಸ್ಕೃತಿಯನ್ನು ಪ್ರಪಂಚಕ್ಕೆ ಅನಾವರಣಗೊಳಿಸಿದ ಕೀರ್ತಿ ಸಂಶೋಧಕರಿಗೆ ಸಲ್ಲುತ್ತದೆ.

**ಪ್ರಾಚೀನ ಕನ್ನಡ ಸಾಹಿತ್ಯವನ್ನು ಕುರಿತು ನಡೆಯದ ಸಂಶೋಧನೆಗಳು:**

ಕನ್ನಡ ಸಂಶೋಧನಾ ವಲಯ ಬಹುತೇಕ ಸಂಶೋಧನೆಗಳು ಹೊಸಗನ್ನಡ

ಸಾಹಿತ್ಯ ಜನಪದ ಸಾಹಿತ್ಯದಲ್ಲಿ ಸಂಶೋಧನೆ ಮಾಡಲು ಸಂಶೋಧನೆ ಮಾಡಲು ಸಂಶೋಧಕರು ತಮ್ಮ ಆಸಕ್ತಿಯನ್ನು ತೋರುತ್ತಿದ್ದಾರೆ.ಆದರೆ, ಪ್ರಾಚೀನ ಕನ್ನಡ ಸಾಹಿತ್ಯವನ್ನು ಕುರಿತು ಹೆಚ್ಚಿನ ಪ್ರಮಾಣದಲ್ಲಿ ಸಂಶೋಧನೆಗಳು ನಡೆಯದಿರುವುದು ಆತಂಕಕಾರಿ ಸಂಗತಿಯಾಗಿದೆ.ಏಕೆಂದರೆ, ಒಂದು ಭಾಷೆಗೆ ಶ್ರೇಷ್ಠತೆ ಯನ್ನು ದೊರಕಿಸಿಕೊಡುವ ಅಂಶಗಳಲ್ಲಿ ಸಾಹಿತ್ಯದ ಪ್ರಾಚೀನತೆ ಮುಖ್ಯವಾಗುತ್ತದೆ.ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ.

**ಉಪಸಂಹಾರ:**

ಒಟ್ಟಾರೆಯಾಗಿ ಹೇಳುವುದಾದರೆ ಕನ್ನಡ ಸಾಹಿತ್ಯವನ್ನು ಕುರಿತು ಸಂಶೋಧನೆ ಮಾಡುವ ಸಂದರ್ಭದಲ್ಲಿ ಸಾಕಷ್ಟು ತೊಂದರೆಗಳಿವೆ. ಹಾಗಂತ ಬೇರೆ ಭಾಷೆಯ ಸಾಹಿತ್ಯವನ್ನು ಕುರಿತು ನಡೆಯುತ್ತಿರುವ ಸಂಶೋಧನೆಗಳಲ್ಲಿ ಸಮಸ್ಯೆಗಳು ಇಲ್ಲ ಎಂದಲ್ಲ. ಸಮಸ್ಯೆಗಳು ಕಡಿಮೆ ಪ್ರಮಾಣದಲ್ಲಿರಬಹುದು. ಪಿಹೆಚ್.ಡಿ ವ್ಯಾಸಂಗ ಮಾಡುವುದರಿಂದ ಉದ್ಯೋಗ ದೊರೆಯುವುದಿಲ್ಲ ಎಂಬ ಮನೋಭಾವ ಸಂಶೋಧಕರದು. ಮಾರ್ಗದರ್ಶಕರಿಗೆ ನನಗೆ ಈಗಾಗಲೇ ನೌಕರಿ ದೊರೆತು ಜೀವನದಲ್ಲಿ ಭದ್ರತೆಯನ್ನು ಕಾಯ್ದುಕೊಂಡಿದ್ದೇನೆ ಎಂಬ ಅಹಂಕಾರ ಈ ಎರಡು ಕಾರಣಗಳಿಂದ ಪಿಹೆಚ್.ಡಿ. ಮಹಾಪ್ರಬಂಧಗಳಲ್ಲಿ ಗುಣಮಟ್ಟ ಕಂಡುಬರುತ್ತಿಲ್ಲ. ಮುಂದಿನ ದಿನಗಳಲ್ಲಾದರೂ ಕನ್ನಡ ಸಂಶೋಧನಾ ವಲಯಕ್ಕೆ ಜವಾಬ್ದಾರಿ ಇರುವ ಮಾರ್ಗದರ್ಶಕರು ಹಾಗೂ ಕುತೂಹಲ, ಆಸಕ್ತಿ ಇರುವ ಸಂಶೋಧಕರ ಪ್ರವೇಶ ಹೆಚ್ಚಿನ ಪ್ರಮಾಣದಲ್ಲಿ ಆಗಿ ಉತ್ತಮ ಸಂಶೋಧನೆ ಗ್ರಂಥಗಳು ಪ್ರಕಟವಾಗಲಿ ಎಂಬುದು ನನ್ನ ಆಶಯ.

**ಕೊನೆ ಟಿಪ್ಪಣಿಗಳು:**

1. ತಾರಾನಾಥ ಎನ್. ಎಸ್. (ಸಂ), ಶತಮಾನದ ಸಂಶೋಧನೆ (2001), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ. 04.
1. ತಾರಾನಾಥ ಎನ್. ಎಸ್. (ಸಂ), ಶತಮಾನದ ಸಂಶೋಧನೆ (2001), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ. IV.
2. ಶ್ರೀನಿವಾಸ ಹಾವನೂರ ಹಾಗೂ ಹೋ. ರಾ. ಸತ್ಯನಾರಾಯಣರಾವ್ (ಸಂ), ಪುರಂದರದಾಸರ ಜನಪ್ರಿಯ ಕೀರ್ತನೆಗಳು (2008), ಅಂಕಿತ ಪುಸ್ತಕ, ಬೆಂಗಳೂರು, ಪುಟ. 163.

**ಪರಾಮರ್ಶನ ಗ್ರಂಥಗಳು:**

1. ಶಿರೂರ ಬಿ. ವಿ., ಸಂಶೋಧನಾ ಸ್ವರೂಪ (2015), ಅನ್ನಪೂರ್ಣ ಪ್ರಕಾಶನ, ಹುಬ್ಬಳಿ.
2. ತಾರಾನಾಥ ಎನ್. ಎಸ್. (ಸಂ), ಶತಮಾನದ ಸಂಶೋಧನೆ (2001), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಶ್ರೀನಿವಾಸ ಹಾವನೂರ ಹಾಗೂ ಹೋ. ರಾ. ಸತ್ಯನಾರಾಯಣರಾವ್ (ಸಂ), ಪುರಂದರದಾಸರ ಜನಪ್ರಿಯ ಕೀರ್ತನೆಗಳು (2008), ಅಂಕಿತ ಪುಸ್ತಕ, ಬೆಂಗಳೂರು.